ವಿಷಯ :– ಬಾಕಿ ಇರುವ ಪಂಪುಸೆಟ್ಟುಗಳಿಗೆ ವಿದ್ಯುತ್ ಕನೆಕ್ಷನ್ ಕೊಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 472 (1200)

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಂಟ್ವಾಳ ತಾಲ್ಲೂಕಿನಲ್ಲಿ ರೈತರು ಪಂಪುಸೆಟಿಗೆ ವಿದ್ಯುತ್ ಸಂಪರ್ಕ ಕೋರಿ ಬಂದ ಅರ್ಜಿಗಳಲ್ಲಿ ವಿದ್ಯುತ್ ಸಂಪರ್ಕ ಕೊಡಲು ಬಾಕಿ ಇರುವ ಅರ್ಜಿಗಳೆಷ್ಟು ?

ಆ) ಎಷ್ಟು ವರ್ಷಗಳಿಂದ ಬಾಕಿ ಇದೆ ಹಾಗೂ ಅದಕ್ಕೆ ಕಾರಣಗಳೇನು ?

ಇ) ಕೂಡಲೇ ಸಂಪರ್ಕ ಕೊಡಲು ಸರ್ಕಾರ ಏನು ವ್ಯವಸ್ಥೆ ಮಾಡುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) 872 ಅರ್ಜಿಗಳು ವಿವಿಧ ಹಂತಗಳಲ್ಲಿ ಬಾಕಿ ಉಳಿದಿವೆ.

ಆ) ಕೆಲವು ಅರ್ಜಿಗಳು ಒಂದರಿಂದ ಒಂದೂವರೆ ವರ್ಷದಿಂದ ಬಾಕಿ ಉಳಿದಿವೆ. ಮಂಡಳಿಯ ಚಾಲ್ತಿ ದರ ಗಳಿಗೆ ಕೆಲಸವನ್ನು ನಿರ್ವಹಿಸಲು ಗುತ್ತಿಗೆದಾರರು ಮುಂದೆ ಬಾರದೇ ಇರುವುದು ಮುಖ್ಯ ಕಾರಣ ಆಗಿರುತ್ತದೆ.

ಇ) ಬಾಕಿ ಇರುವ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲೆಂದೇ ಪ್ರಸಕ್ತ ಸಾಲಿಗಾಗಿ ನಿಗದಿ ಪಡಿಸಲಾಗಿದ್ದ 40.000 ಗುರಿಯನ್ನು 60.000 ಕ್ಕೆ ಸರ್ಕಾರವು ಹೆಚ್ಚಿಸಿದೆ. ಅದೇ ರೀತಿ ಪ್ರಸಕ್ತ ಸಾಲಿಗಾಗಿ ಬಂಟ್ವಾಳ ತಾಲ್ಲೂಕಿಗಾಗಿ ನಿಗದಿಪಡಿಸಲಾಗಿದ್ದ ಗುರಿಯನ್ನು 380 ರಿಂದ 480 ಪಂಪುಸೆಟ್ಟುಗಳಿಗೆ ಹೆಚ್ಚಿಸಲಾಗಿದೆ.

ವಿಷಯ :– ಚಿಂತಾಮಣಿ ತಾಲ್ಲೂಕಿನಲ್ಲಿ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 474 (1195)

ಶ್ರೀ ಸಿ. ಬೈರೇಗೌಡ (ವೇಮಗಲ್) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾರೀಖು 1–11–90 ರಂದು ಕೋಲಾರ, ಚಿಂತಾಮಣಿ ತಾಲ್ಲೂಕಿನಲ್ಲಿ ಇದ್ದ ನೀರಾವರಿ ಪಂಪು ಸೆಟ್ಟುಗಳ ಸಂಖ್ಯೆ ಎಷ್ಟು ? ಇವುಗಳಿಂದ ಮೇಲ್ಕಂಡ ತಾರೀಖಿನಿಂದ ಬರಬೇಕಾದ ಬಾಕಿ ಎಷ್ಟು ?

ಆ) ಈ ಪಂಪುಸೆಟ್ಟುಗಳಲ್ಲಿ ವಾಸ್ತವವಾಗಿ ಬಳಕೆಯಲ್ಲಿರುವ ಪಂಪುಸೆಟ್ಟುಗಳು ಎಷ್ಟು ? ಮತ್ತು ಇವುಗಳಿಂದ ಬರಬೇಕಾದ ಬಾಕಿ ಎಷ್ಟು ?

ಇ) ಭಾವಿ ಮತ್ತು ಕೊಳವೆ ಭಾವಿಗಳಲ್ಲಿ ನೀರಿಲ್ಲದೆ ಪಂಪುಸೆಟ್ಟುಗಳು ಬಳಕೆಯಲ್ಲಿ ಇಲ್ಲದಿದ್ದರೂ ಅಂತಹವುಗಳ ಮೇಲೂ ವಿದ್ಯುತ್ ದರವನ್ನು ವಿಧಿಸುತ್ತಿರುವುದು ನಿಜವೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ತಾರೀಖು 1–11–90 ರಲ್ಲಿರುವಂತೆ ಕೋಲಾರ ಮತ್ತು ಚಿಂತಾಮಣಿ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ 10, 132 ಮತ್ತು 10, 311 ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ ತಾರೀಖು 1–11–90 ರಲ್ಲಿರುವಂತೆ ಕೋಲಾರ ಮತ್ತು ಚಿಂತಾಮಣಿ ತಾಲ್ಲೂಕುಗಳಲ್ಲಿ ಇರುವ ನೀರಾವರಿ ಪಂಪುಸೆಟ್ಟುಗಳಿಂದ ಅನುಕ್ರಮವಾಗಿ 83.30 ಲಕ್ಷ ರೂ. ಮತ್ತು 32.04 ಲಕ್ಷ ರೂ. ಬಾಕಿ ಹಣ ಮಂಡಳಿಗೆ ಬರಬೇಕಾಗಿದ್ದಿತು.

ಆ) ಕೋಲಾರ ತಾಲ್ಲೂಕಿನಲ್ಲಿ 6479 ನೀರಾವರಿ ಪಂಪುಸೆಟ್ಟುಗಳು ಮತ್ತು ಚಿಂತಾಮಣಿ ತಾಲ್ಲೂಕಿನಲ್ಲಿ 8093 ಪಂಪುಸೆಟ್ಟುಗಳು ವಾಸ್ತವವಾಗಿ ಬಳಕೆಯಲ್ಲಿದ್ದು ಇವುಗಳಿಂದ ಅನುಕ್ರಮವಾಗಿ 32.87 ಲಕ್ಷ ರೂ ಗಳು ಮತ್ತು 10.54 ಲಕ್ಷ ರೂ. ಗಳು ಬಾಕಿ ಮಂಡಳಿಗೆ ಬರಬೇಕಾಗಿದ್ದಿತು.

ಇ) ಹೌದು, ಇಂತಹ ಸಂದರ್ಭಗಳಲ್ಲಿ ಪಂಪುಸೆಟ್ಟುದಾರರು ತಾವಾಗಿಯೇ ವಿದ್ಯುತ್ ಡಿಸ್‌ಕನೆಕ್ಷನ್ ಮಾಡಲು ಮಂಡಳಿಗೆ ಅರ್ಜಿಯನ್ನು ನೀಡುವವರೆಗೆ ವಿದ್ಯುತ್ ದರವನ್ನು ವಿಧಿಸಲಾಗುವುದು.